www.ecourtsindia.com



**OS. No.14/2019**

**P.W-4**

**( ದಿನಾಂಕ.17-08-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಪಾಟೀ ಸವಾಲುಃ** A.G.P ರವರಿಂದ

ಈ ಪ್ರಕರಣದಲ್ಲಿ ಪ್ರತಿವಾದಿಯವರು ಏನು ತಕರಾರು ಸಲ್ಲಿಸಿರುತ್ತಾರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಸರ್ವೇ ನಂಬರ 2 ಸರಕಾರದ ದಸ್ತಾವೇಜುಗಳ ಪ್ರಕಾರ ಸರಕಾರದ ಸ್ವತ್ತು ಎಂದರೆ ಸರಿ. ಸರ್ವೇ ನಂಬರ 2 ರ ಪಹಣಿಗಳಲ್ಲಿ ದಾವಾ ಸ್ವತ್ತನ್ನು ಸರಕಾರ ದೇವಲು ಎಂದು ಬರೆದಿರುತ್ತಾರೆ ಎಂದರೆ ಸರಿ. ಸರ್ವೇ ನಂಬರ 2 ರಲ್ಲಿ ಸರಕಾರಿ ಶಾಲೆ ಇದೆ ಎಂದರೆ ಸರಿ ಮತ್ತು ಅಂಗನವಾಡಿ ಕಚೇರಿ, ಪಂಚಾಯತಿ ಕಚೇರಿ ಅಲ್ಲದೆ ಇಸ್ಮಾಯಲ್ ಖಾಧರಿ ದರ್ಗಾ ಇದೆ ಎಂದರೆ ಸರಿ. ಅಲ್ಲದೆ ಒಂದು ಸಿಮೆಂಟ ರಸ್ತೆ ಇದೆ ಎಂದರೆ ಸರಿ. ಅದೇ ರೀತಿ ಒಂದು ಕೈಪಂಪು(ಕೊಳವೆ ಬಾವಿ) ಇದೆ ಎಂದರೆ ಸರಿ. ಸರಕಾರಿ ಶಾಲೆ, ಅಂಗನವಾಡಿ ಮತ್ತು ಪಂಚಾಯತಿಗೆ ಅದೇ ರಸ್ತೆ ಮುಖಾಂತರ ಓಡಾಡುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿರುವ ಸಿಮೆಂಟ ರಸ್ತೆ ಸುಮಾರು ಅರ್ದ KM ವರೆಗೂ ಇರುತ್ತದೆ. ಸದರಿ ರಸ್ತೆ ಅಗಲು 20 ಅಡಿ ಇರುತ್ತದೆ. ಸದರಿ ರಸ್ತೆಯಲ್ಲಿ ಎರಡು ಗಾಡಿಗಳು ಓಡಾಡುತ್ತವೆ ಎಂದರೆ ಸರಿ. ಸದರಿ ರಸ್ತೆಯನ್ನು ಪಂಚಾಯತಿಯವರು ನಿರ್ಮಾಣ ಮಾಡಿರುತ್ತಾರೆ.

This is a True Copy of the Court Records Online. Authenticated @ districts.ecourtsindia.com/cnr/KAKB210000902019/truecopy/order-7.pdf

www.ecourtsindia.com



**OS. No.14/2019**
**P.W-4**

ದಾವಾ ಸ್ವತ್ತನ್ನು ಕುರುಬ ಸಮಾಜದವರು ಖರೀದಿಸಿಲ್ಲ. ದಾವಾ ಸ್ವತ್ತಿನ ಸರ್ವೇ ನಂಬರ ಸರಕಾರ ದಾಖಲೆ ಪ್ರಕಾರ ಸರಕಾರದ ಮಾಲೀಕತ್ವದಲ್ಲಿ ಇದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಸಾಗುವಳಿ ಮಾಡಲು ಬರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತಿನಲ್ಲಿರುವ 50 ಅಡಿ ಉದ್ದ ಹಾಗೂ 50 ಅಡಿ ಅಗಲ ಇರುತ್ತದೆ. ದಾವಾ ಸ್ವತ್ತಿನಲ್ಲಿರುವ ಗುಡಿ ಯಾವತ್ತಿಗೂ ಕುರುಬ ಸಮಾಜದವರಿಗೆ ಸೇರಿದ್ದು ಎಂದು ಪಹಣಿಯಲ್ಲಿ ಬರೆದಿಲ್ಲ ಎಂದರೆ ಸರಿ. ದಾವಾ ಸ್ವತ್ತಿನ ಜಮೀನು ಸರಕಾರಿ ಜಮೀನು ಎಂದರೆ ಸರಿ. ಖಾಸಗಿ ಜಮೀನು ಅಲ್ಲ ಎಂದರೆ ಸರಿ. ದಾವಾ ಸ್ವತ್ತು ಕುರುಬ ಸಮಾಜದವರ ಮಾಲೀಕತ್ವ ಮತ್ತು ಸ್ವಾಧೀನದಲ್ಲಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಆಳಂದ**

This is a True Copy of the Court Records Online. Authenticated @ districts.ecourtsindia.com/cnr/KAKB210000902019/truecopy/order-7.pdf